ಅಧಿಕಾರಿಗಳು ಹಳ್ಳಿಗಳಿಗೆ ಅನುಗುಣವಾಗಿ ಪುಸ್ತಕವನ್ನು ಖರೀದಿ ಮಾಡಿಕೊಡುವುದಕ್ಕೆ ನಾವು ಪ್ರಯತ್ನವನ್ನು ಮಾಡುತ್ತೇವೆ.

ವಿಕ್ಟೋರಿಯ ಆಸ್ಪತ್ರೆಯಲ್ಲಿ ಹೃದ್ರೋಗ ಚಿಕಿತ್ಸಾ ಘಟಕ.

149 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹೃದ್ರೋಗ ಚಿಕಿತ್ಸಾ ಘಟಕ ಇದೆಯೇ?*

ಆ) *ಇದ್ದಲ್ಲಿ ಹೃದ್ರೋಗ ತಜ್ಞರನ್ನು ನೇಮಕಾತಿ ಮಾಡಲಾಗಿದೆಯೇ?*

ಇ) *ಇಲ್ಲದಿದ್ದಲ್ಲಿ ವಿಕ್ಟೋರಿಯ ಆಸ್ಪತ್ರೆಯಲ್ಲಿ ಹೃದ್ರೋಗ ಚಿಕಿತ್ಸಾ ಘಟಕ ಸ್ಥಾಪಿಸಲು ಸರ್ಕಾರದವರು ಪರಿಶೀಲಿಸುವರೆ?*

ಡಾ|| ಎಂ. ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :

ಅ) ಹೌದು.

ಆ) ಹೌದು.

ಇ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ನಾನು ಕೇಳಿರುವುದೇನೆಂದರೆ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹೃದ್ರೋಗ ಚಿಕಿತ್ಸಾ ಘಟಕ ಇದೆಯೇ ಎಂದು ಕೇಳಿರುವುದಕ್ಕೆ ಇವರು ಉತ್ತರದಲ್ಲಿ ಇದೆ ಎಂದು ಹೇಳಿದ್ದಾರೆ. ಆದರೆ ನನಗೆ ತಿಳಿದಿರುವಂತೆ ಅಲ್ಲಿ ಅಂದರೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹೃದ್ರೋಗ ಚಿಕಿತ್ಸಾ ಘಟಕ ಇಲ್ಲ, ಬಹುಶಃ ಆ ಕಾಂಪೌಂಡನಲ್ಲಿ ಜಯದೇವ ಹೃದ್ರೋಗ ಆಸ್ಪತ್ರೆ ಇರುವುದರಿಂದ ಆ ರೀತಿ ಹೇಳಿದ್ದಾರೇನೋ ನನಗಂತೂ ಗೊತ್ತಿಲ್ಲ. ಆದರೆ ಇಲ್ಲಿ ಒಂದು ಸತ್ಯವಿದೆ. ಏನೆಂದರೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹೃದ್ರೋಗ ಚಿಕಿತ್ಸಾ ಘಟಕ ಇಲ್ಲದಿದ್ದರೂ ಕೂಡ ಅಲ್ಲಿ ಒಬ್ಬ ಹೃದ್ರೋಗ ವೈದ್ಯರನ್ನು ಮಾತ್ರ ನೇಮಕ ಮಾಡಿದ್ದಾರೆ. ಆತನ ಕೆಲಸವೇನೆಂದರೆ ಮೆಡಿಸನನ್ನು ಮಾಡತಕ್ಕಂಥದ್ದು. ವಿಕ್ಟೋರಿಯಾ ಆಸ್ಪತ್ರೆ ಸಾಮಾನ್ಯ ಜನರು ಹೋಗತಕ್ಕಂಥ, ಬಡ ಜನರು ಹೋಗತಕ್ಕಂಥ ಒಂದು ಪ್ರಮುಖವಾದ ಹಳೆಯ ಆಸ್ಪತ್ರೆಯಾಗಿದೆ. ಇಲ್ಲಿ ಹೃದ್ರೋಗ ಚಿಕಿತ್ಸಾ ಘಟಕವನ್ನು ಸ್ಥಾಪನೆ ಮಾಡಿದ್ದೇವೆ ಎಂದಿರುವ ವಿಷಯ ಸತ್ಯಕ್ಕೆ ದೂರವಾದ ವಿಷಯವಾಗಿದೆ. ಇದರ ನಿಜಾಂಶವೇನು ಎಂಬ ಬಗ್ಗೆ ಮಂತ್ರಿಯವರು ಹೇಳಬೇಕು. ಅಲ್ಲಿ ಏನು ಒಬ್ಬ ಡಾಕ್ಟರ್ ಇದ್ದಾರೆ ಅವರಿಗೆ ಹೃದ್ರೋಗ ಚಿಕಿತ್ಸೆ ಮಾಡತಕ್ಕಂಥ ಕೆಲಸ ಅವರಿಗೆ ಕೊಟ್ಟಿಲ್ಲ. ಅವರು ಬೇರೆ ಏನೋ ಕೆಲಸವನ್ನು ಮಾಡಿಕೊಂಡು ಅಲ್ಲಿದ್ದಾರೆ. ಅದು ಏನು ಎಂಬ ಬಗ್ಗೆ ಸರಿಯಾದಂಥ ಉತ್ತರವನ್ನು ಮಾನ್ಯ ಸಚಿವರು ಕೊಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಡಾ. ಎಂ. ಶಂಕರ್‌ನಾಯಕ್ : ಮಾನ್ಯ ಉಪಾಧ್ಯಕ್ಷರೇ, ಪ್ರತಿಯೊಂದು ಮೆಡಿಕಲ್ ಕಾಲೇಜಿನಲ್ಲಿ ಒಂದು ಮೆಡಿಸನ್ ಡಿಪಾರ್ಟ್‌ಮೆಂಟ್ ಎಂದು ಇರುತ್ತದೆ. ಅವರೇ ಹೃದಯ ಕಾಯಿಲೆ

ಬಗ್ಗೆ ಪರೀಕ್ಷೆಯನ್ನು ಮಾಡತಕ್ಕಂಥದ್ದು. ಈಗ ನಾವು ಜಯದೇವ ಹೃದ್ರೋಗ ಆಸ್ಪತ್ರೆಯನ್ನು ಬೇರೆ ಮಾಡಿದ್ದೇವೆಯೇ ಹೊರತು ಹಿಂದಿನಿಂದಲೂ ಮೆಡಿಕಲ್ ಕಾಲೇಜಿನಲ್ಲಿ ಇರುವ ಮೆಡಿಸನ್ ಡಿಪಾರ್ಟ್‌ಮೆಂಟ್‌ನವರೇ ಈ ಹೃದಯ ಕಾಯಿಲೆ ರೋಗಿಗಳಿಗೆ ಟ್ರೀಟ್ ಮಾಡುತ್ತಿದ್ದರು. ಆದರೆ ಕೆಲವು ಡಾಕ್ಟರ್‌ಗಳು ಅಸಿಸ್ಟೆಂಟ್ ಪ್ರೊಫೆಸರ್, ಪ್ರೊಫೆಸರ್ ಆದ ಮೇಲೆ ಇನ್ನೊಂದು ಡಿಗ್ರಿಯನ್ನು ಮಾಡಿದ ತಕ್ಷಣ ನಮಗೆ ಆ ಆಸ್ಪತ್ರೆ ಬೇಕು ಎಂದು ಹೇಳುತ್ತಾರೆ. ಉದಾಹರಣೆಗೆ ಎಸ್.ಡಿ.ಎ. ಹುದ್ದೆಗೆ ಎಸ್.ಎಸ್.ಎಲ್.ಸಿ. ಆದರೆ ಸಾಕು ಎಂದು ಹೇಳುತ್ತೇವೆ ಆದರೆ ಬಿ.ಎ. ಆದವರು ಎಸ್.ಡಿ.ಎ. ಕೆಲಸ ಮಾಡಬಾರದು ಎಂದೇನೂ ಇಲ್ಲವಲ್ಲಾ. ಅದೇ ರೀತಿಯಲ್ಲಿ ಹೃದಯ ರೋಗಕ್ಕೆ ಸಂಬಂಧಪಟ್ಟ ಕಾಯಿಲೆಗಳನ್ನು ಆ ಕಾಲೇಜಿನ ಮೆಡಿಸನ್ ಡಿಪಾರ್ಟ್‌ಮೆಂಟ್‌ನವರು ನೋಡಿಕೊಳ್ಳಬೇಕು. ಅವರಿಗೇನಾದರೂ ಹೃದಯ ಕಾಯಿಲೆಗೆ ಸಂಬಂಧಪಟ್ಟಂತೆ ಏನಾದರೂ ಎಕ್ವಿಪ್‌ಮೆಂಟ್ ಅಥವಾ ಮತ್ತೇನಾದರೂ ಬೇಕಾದರೆ ಸಂಬಂಧಪಟ್ಟ ಆಸ್ಪತ್ರೆಯವರಿಗೆ ತಿಳಿಸಿ ಅದನ್ನು ಪಡೆದುಕೊಂಡು ಡೆವಲಪ್ ಮಾಡಬೇಕೇ ಹೊರತು ಹೃದಯ ಕಾಯಿಲೆಗೋಸ್ಕರವೇ ಒಬ್ಬ ಡಾಕ್ಟರ್ ಎಂದೇನೂ ಇಲ್ಲ. ಹೃದಯ ಕಾಯಿಲೆಗೆ ಮೆಡಿಸನ್ ಡಿಪಾರ್ಟ್‌ಮೆಂಟ್‌ನವರೇ ಟ್ರೀಟ್ ಮಾಡಬೇಕು. ಪ್ರತಿಯೊಂದು ಕಾಲೇಜಿನಲ್ಲಿ ಐದೈದು ಯೂನಿಟ್‌ಗಳು ಇರುತ್ತವೆ, ಅದಕ್ಕೆ ಒಬ್ಬೊಬ್ಬ ಪ್ರೊಫೆಸರ್, ಅಸಿಸ್ಟೆಂಟ್ ಪ್ರೊಫೆಸರ್ ಇರುತ್ತಾರೆ, ಲೆಕ್ಚರರ್ಸ್ ಇರುತ್ತಾರೆ, ಅವರು ಹೃದಯ ಕಾಯಿಲೆಯನ್ನು ಪರೀಕ್ಷೆ ಮಾಡತಕ್ಕಂಥವರು. ತಾವು ಹೇಳತಕ್ಕಂಥ ವ್ಯಕ್ತಿ ತಾನು ಡಿ.ಎಮ್. ಕಾರ್ಡಿಯಾಲಜಿ ಮಾಡಿದ್ದೇನೆ ಎಂಬ ಕಾರಣಕ್ಕಾಗಿ ನಾನು ಜಯದೇವ ಆಸ್ಪತ್ರೆಗೆ ಹೋಗುತ್ತೇನೆಂದರೆ ಹೇಗೆ? ಅವರು ನೇಮಕವಾಗಿರುವುದು ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ. ಅವರು ಹೃದಯ ಕಾಯಿಲೆಯನ್ನು ಮೆಡಿಸನ್ ಡಿಪಾರ್ಟ್‌ಮೆಂಟಿನಲ್ಲಿ ನೋಡಿಕೊಳ್ಳಬೇಕು. ಅದರ ಬದಲು ಇನ್ನೊಂದು ಆಸ್ಪತ್ರೆಯಲ್ಲಿ ನೋಡಿಕೊಳ್ಳುತ್ತೇನೆ ಎಂದರೆ ಅದಕ್ಕೆ ಅವಕಾಶವಿಲ್ಲ. ಆದುದರಿಂದ ಪ್ರತಿಯೊಂದು ಕಾಲೇಜಿನಲ್ಲಿ ಹೃದಯಕ್ಕೆ ಸಂಬಂಧಪಟ್ಟ ಕಾಯಿಲೆ ಪರೀಕ್ಷೆಯನ್ನು ಮೆಡಿಸನ್ ಡಿಪಾರ್ಟ್‌ಮೆಂಟ್‌ನವರೇ ನೋಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಯಾರೋ ಒಬ್ಬ ಡಾಕ್ಟರ್‌ಗೆ ಸಂಬಂಧಪಟ್ಟಂತೆ ಪ್ರಶ್ನೆಯನ್ನು ಕೇಳಲಿಲ್ಲ. ಮಂತ್ರಿಗಳು ಆ ರೀತಿಯಲ್ಲಿ ತಿಳಿದುಕೊಂಡರೆ ಅದಕ್ಕೆ ನಾನು ಜವಾಬ್ದಾರನಲ್ಲ. ನಾನು ಕೇಳಿರತಕ್ಕಂಥ ಪ್ರಶ್ನೆಯೆಂದರೆ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹೃದ್ರೋಗ ಚಿಕಿತ್ಸಾ ಘಟಕ ಇದೆಯೇ ಎಂಬುದೇ ಹೊರತು ಯಾವುದೋ ಡಾಕ್ಟರ್ ಅಲ್ಲಿದ್ದಾರೆ, ಇಲ್ಲಿದ್ದಾರೆ ಎಂಬ ಬಗ್ಗೆಯಲ್ಲ.

ಡಾ|| ಎಂ. ಶಂಕರ್‌ನಾಯಕ್ : ನೀವೇ ಹೇಳಿದಿರಲ್ಲಾ, ಒಬ್ಬ ಡಾಕ್ಟರ್ ಅಲ್ಲಿದ್ದಾರೆ ಎಂದು ಅದಕ್ಕಾಗಿ ನಾನು ಹೇಳಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ತಾವು ಉತ್ತರದಲ್ಲಿ ಏನು ಹೇಳಿದ್ದೀರೆಂದರೆ ಅಲ್ಲಿ ಡಾಕ್ಟರ್ ಇದ್ದಾರೆ ಎಂದು ಹೇಳಿದಕ್ಕೆ ಸಂಬಂಧಪಟ್ಟಂತೆ ನಾನು ಪ್ರಶ್ನೆ ಕೇಳಿದ್ದು. ಹೃದ್ರೋಗ ವೈದ್ಯರು ಅಲ್ಲಿದ್ದಾರೆ ಎಂಬುದಕ್ಕೆ ಮಾತ್ರ ನಾನು ಹೇಳಿದ್ದು. ನನ್ನ ಮೂಲಭೂತವಾದ ಪ್ರಶ್ನೆ ಏನೆಂದರೆ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹೃದ್ರೋಗ ಚಿಕಿತ್ಸಾ ಘಟಕ ಇದೆಯೇ ಎಂದು ಕೇಳಿರುವುದು. ತಾವು ಉತ್ತರ ಕೊಟ್ಟಿರುವುದರಲ್ಲಿ ಏನಿದೆಯೆಂದರೆ ಅಲ್ಲಿ ಹೃದ್ರೋಗ ಚಿಕಿತ್ಸಾ ಘಟಕವೂ ಇದೆ ಮತ್ತು ಅಲ್ಲಿ ಡಾಕ್ಟರ್

ಕೂಡ ಇದ್ದಾರೆ ಎಂದು ಹೇಳಿರುವುದಕ್ಕೆ ನಾನು ತಮ್ಮನ್ನು ಕೇಳಿದ್ದು. ನನ್ನ ಮೂಲಭೂತವಾದ ಪ್ರಶ್ನೆ ಅಲ್ಲಿ ಹೃದ್ರೋಗ ಚಿಕಿತ್ಸಾ ಘಟಕ ಇದೆಯೇ ಅಥವಾ ಇಲ್ಲದಿದ್ದರೆ ಅದನ್ನು ಯಾವಾಗ ಸ್ಥಾಪನೆ ಮಾಡುತ್ತೀರಿ ಎಂಬ ಬಗ್ಗೆ ಹೇಳಬೇಕು.

ಡಾ||ಎಂ. ಶಂಕರ್‌ನಾಯಕ್ : ಮಾನ್ಯ ಉಪಾಧ್ಯಕ್ಷರೆ, ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ರೆಕಮೆಂಡ್ ಮಾಡಿರುವ ಪ್ರಕಾರ ಅಲ್ಲಿ ಹೃದ್ರೋಗ ಚಿಕಿತ್ಸಾ ಘಟಕವನ್ನು ಸೆಪರೇಟ್ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಅಲ್ಲಿ ಹೃದಯ ರೋಗಿಗಳನ್ನು ಟ್ರೀಟ್ ಮಾಡತಕ್ಕಂಥವರು ಮೆಡಿಸನ್ ಡಿಪಾರ್ಟ್‌ಮೆಂಟ್‌ನವರು. ಮೆಡಿಸನ್ ಡಿಪಾರ್ಟ್‌ಮೆಂಟ್‌ನವರು ಶ್ವಾಸಕೋಶ ಹೃದಯ ಮತ್ತು ಬೇರೆ ಯಾವುದೇ ಭಾಗದ ಕಾಯಿಲೆಗಳನ್ನು ನೋಡತಕ್ಕಂಥವರಾಗಿದ್ದಾರೆ. ಹೃದಯ ಕಾಯಿಲೆಗೋಸ್ಕರ ಮೆಡಿಕಲ್ ಕಾಲೇಜಿನಲ್ಲಿ ಒಂದು ಸೆಪರೇಟ್ ಚಿಕಿತ್ಸಾ ಘಟಕವನ್ನು ತೆಗೆಯುವುದಕ್ಕೆ ಅವಕಾಶವಿಲ್ಲ. ಮೆಡಿಕಲ್ ಕೌನ್ಸಿಲ್‌ನವರು ಈ ಬಗ್ಗೆ ಏನೇನು ಗೈಡ್‌ಲೈನ್ಸನ್ನು ಕೊಟ್ಟಿದ್ದಾರೆ ಆ ಪ್ರಕಾರವೇ ನಾವು ಮಾಡುವುದು. ಹೃದಯ ರೋಗವನ್ನು ನೋಡುವವರು ಮೆಡಿಸನ್ ಡಿಪಾರ್ಟ್‌ಮೆಂಟಿನವರೇ. ಅವರು ಹೃದಯಕ್ಕೆ ಸಂಬಂಧಪಟ್ಟ ಕಾಯಿಲೆಗಳನ್ನು ನೋಡುವುದಿಲ್ಲ ಎಂದು ಹೇಳಿ ಯಾವ ರೋಗಿಯನ್ನು ಅವರು ಕಳುಹಿಸಬಾರದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಅದರ ಬಗ್ಗೆ ಪ್ರಶ್ನೆಯನ್ನು ಕೇಳಲಿಲ್ಲ. ಇವೆಲ್ಲಾ ವಿಚಾರ ನನಗೆ ಗೊತ್ತಿದೆ. ವಿಕ್ಟೋರಿಯಾ ಆಸ್ಪತ್ರೆ ಬಹಳ ಪ್ರಮುಖವಾದ ಹಳೆಯ ಆಸ್ಪತ್ರೆಯಾಗಿದೆ. ಅದನ್ನು ನೀವು ಕೇವಲ ಒಂದು ಮೆಡಿಕಲ್ ಕಾಲೇಜ್ ಎಂದು ತಿಳಿದು ಟ್ರೀಟ್ ಮಾಡುವುದಕ್ಕೆ ಬರುವುದಿಲ್ಲ. ಅದಕ್ಕೆ ಒಂದು ದೊಡ್ಡ ಇತಿಹಾಸವೇ ಇದೆ. ಅದಕ್ಕೆ ಸಾಮಾನ್ಯ ಜನರು ಹೋಗತಕ್ಕಂಥವರಾಗಿದ್ದಾರೆ. ಜಯದೇವ ಆಸ್ಪತ್ರೆಗೆ ಹೋಗಲು ಸಾಮಾನ್ಯ ಜನಕ್ಕೆ ಇವೊತ್ತು ಕಷ್ಟವಾಗುತ್ತಿದೆ. ನನ್ನ ಮೂಲಭೂತವಾದ ಪ್ರಶ್ನೆ ಹೃದ್ರೋಗ ಚಿಕಿತ್ಸಾ ಘಟಕವನ್ನು ಸ್ಥಾಪನೆ ಮಾಡಿ ಅದಕ್ಕೆ ಬೇಕಾಗಿರತಕ್ಕಂಥ ಎಲ್ಲಾ ಸಲಕರಣೆಗಳನ್ನು ಅಲ್ಲಿ ಒದಗಿಸುತ್ತೀರಾ ಎಂಬುದೇ ಆಗಿದೆ. ಇದನ್ನು ಮಾಡುತ್ತೀರೋ ಅಥವಾ ಇಲ್ಲವೋ ಎಂಬುದನ್ನು ಹೇಳಬೇಕು. ಒಂದು ಮೆಡಿಕಲ್ ಕಾಲೇಜ್ ಎಂದಾಕ್ಷಣ ಅದರಲ್ಲಿ ಎಲ್ಲವೂ ಇರಬೇಕೆಂದೇನೂ ಇಲ್ಲ. ಕಾರ್ಡಿಯಾಲಜಿ ಎನ್ನುವುದು ಒಂದು ಸ್ಪೆಸಿಫಿಕ್ ಸಬ್ಜೆಕ್ಟ್ ಆಗಿದೆ. ಇದಕ್ಕೆ ನಿರ್ದಿಷ್ಟವಾದ ಒಂದು ವ್ಯವಸ್ಥೆ ಇರಬೇಕು. ಆದುದರಿಂದಲೇ ನಾನು ಕೇಳಿರುವುದು ಏನೆಂದರೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹೃದ್ರೋಗ ಚಿಕಿತ್ಸಾ ಘಟಕವನ್ನು ಸ್ಥಾಪನೆ ಮಾಡುತ್ತೀರೋ ಅಥವಾ ಇಲ್ಲವೋ ಎಂಬ ಬಗ್ಗೆ ಹೇಳಿ?

ಡಾ|| ಎಂ. ಶಂಕರನಾಯಕ್ : ಅದಕ್ಕೆ ಸೆಪರೇಟ್ ಘಟಕವನ್ನು ಸ್ಥಾಪನೆ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಇದಕ್ಕಾಗಿ ನುರಿತ ವೈದ್ಯರು ಯಾರು ಬೇಕೋ ಅವರನ್ನು ಅವರೇ ಕರೆಸಿಕೊಳ್ಳಬೇಕು. ಈಗ ಅಲ್ಲಿ ಇ.ಸಿ.ಜಿ. ಮೆಷಿನ್ ಮತ್ತು ಮತ್ತಿತರ ಮೆಷಿನ್‌ಗಳು ಇವೆ. ಇದರ ಜೊತೆಗೆ ಮತ್ತೆ ಏನಾದರೂ ಬೇಕಾದರೆ ಆಸ್ಪತ್ರೆಯಲ್ಲಿ ಸೂಪರಿಂಟೆಂಡೆಂಟ್‌ರನ್ನೋ ಅಥವಾ ಡಿ.ಎಮ್.ಓ. ರವರನ್ನು ಕಾಂಟಾಕ್ಟ್ ಮಾಡಿ ನಮ್ಮ ಡಿಪಾರ್ಟ್‌ಮೆಂಟ್‌ಗೆ ಇಂಥವುಗಳು ಬೇಕು ಎಂದು ಹೇಳಬೇಕು. ಇದು ಒಂದು. ಈ ಹಾರ್ಟ್ ಸರ್ಜರಿ ಕೆಲಸವನ್ನು ಅಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ಅದನ್ನು ನಾವು ಬೇರೆ

ಆಸ್ಪತ್ರೆಗೆ ಕಳುಹಿಸಬೇಕಾಗುತ್ತದೆ. ಏಕೆಂದರೆ ಅದಕ್ಕೆ ಸಂಬಂಧಪಟ್ಟ ವೈದ್ಯರು ಅಲ್ಲಿ ಇರುವುದಿಲ್ಲ. ಆದರೆ ಹೃದಯಕ್ಕೆ ಸಂಬಂಧಪಟ್ಟ ಕಾಯಿಲೆಗಳ ಟ್ರೀಟ್‌ಮೆಂಟ್ ಕೆಲಸ ಮೆಡಿಸನ್ ಡಿಪಾರ್ಟ್‌ಮೆಂಟ್‌ನಲ್ಲಿ ನಡೆಯುತ್ತಿದೆ. ಆದರೆ ಶಸ್ತ್ರ ಚಿಕಿತ್ಸೆಗೆ ನಾವು ಜಯದೇವ ಆಸ್ಪತ್ರೆಗೆ ಕಳುಹಿಸಿಕೊಡುತ್ತೇನೆ.

ಶ್ರೀ ಜೆ.ಸಿ. ಮಧುಸ್ವಾಮಿ : ಮಾನ್ಯ ಉಪಾಧ್ಯಕ್ಷರೇ, ಈಗ ಕೆಲವು ವೈದ್ಯರನ್ನು ಉನ್ನತ ಶಿಕ್ಷಣಕ್ಕಾಗಿ ಕಳುಹಿಸಿ ಅವರನ್ನು ಸ್ಪೆಷಲೈಸ್ಡ್ ಮಾಡಿರುತ್ತೀರಿ. ಅಂಥವರಿಗೆ ನೀವು ಕೇಡರ್ ಬದಲಾವಣೆ ಮಾಡಿಕೊಟ್ಟರೆ ನಿಮಗಾಗತಕ್ಕಂಥ ತೊಂದರೆಯಾದರೂ ಏನು? ಈಗ ನೀವೇ ಹೇಳಿದಿರಿ, ಅಲ್ಲೊಬ್ಬ ಡಾಕ್ಟರ್ ಜನರಲ್ ಮೆಡಿಸನ್‌ನಲ್ಲಿ ಪ್ರೊಫೆಸರ್ ಆಗಿದ್ದುಕೊಂಡು ಡಿ.ಎಂ. ಕಾರ್ಡಿಯಾಲಜಿ ಮಾಡಿದ್ದಾನೆಂದಿರಿ. ಡಿ.ಎಂ. ಕಾರ್ಡಿಯಾಲಜಿ ಮಾಡಿರುವವರು ಈ ರಾಜ್ಯದಲ್ಲಿ ನಾಲ್ಕೈದು ಜನರು ಸಿಗಬಹುದಷ್ಟೆ. ಅವರನ್ನು ಆ ಕಡೆಗೆ ವರ್ಗಾವಣೆ ಮಾಡಿ ಕೇಡರ್ ಚೇಂಜ್ ಮಾಡಿ ಜನಗಳಿಗೆ ಸರ್ವಿಸ್ ಕೊಡುವುದಕ್ಕೆ ಆಗುವ ತೊಂದರೆಯಾದರೂ ಏನು? ಆತನನ್ನು ಸ್ಪೆಷಲೈಸ್ಡ್ ಮಾಡುವುದಕ್ಕೆ ಸರ್ಕಾರಿ ದುಡ್ಡನ್ನು ಖರ್ಚು ಮಾಡಲಿಲ್ಲವೇ? ನೀವು ಏಕೆ ಅವರನ್ನು ಡೆಪ್ಯುಟೇಷನ್ ಮತ್ತು ಹೈಯರ್ ಎಜುಕೇಷನ್‌ಗೆ ಕಳುಹಿಸುತ್ತೀರಿ? ಆತನ ಸರ್ವೀಸಸ್‌ಅನ್ನು ಯುಟಿಲೈಸ್ ಮಾಡಿಕೊಳ್ಳಬೇಕೆಂದೇ ತಾನೇ? ಅವನು ಎಂಟ್ರಿಯಾಗುವಾಗ ಯಾವ ಸರ್ವೀಸ್‌ನಲ್ಲಿ ಇದ್ದನೋ ಅದೇ ಸರ್ವೀಸಸನ್ನು ಕಂಟಿನ್ಯೂ ಮಾಡುತ್ತೇವೆ ಎಂದರೆ ಸ್ಪೆಷಲೈಸ್ಡ್ ಮಾಡಿಸುವ ಅಗತ್ಯವಾದರೂ ಏನಿತ್ತು? ದಯಮಾಡಿ ಆ ಬಗ್ಗೆ ತಾವು ಪರಿಶೀಲನೆ ಮಾಡಿ ಅರ್ಹತೆ ಇರುವ ವೈದ್ಯರಿಗೆ ತಾವು ಕೇಡರ್ ಬದಲಾವಣೆ ಮಾಡುವುದಕ್ಕೆ ಆಗಿರುವ ತೊಂದರೆಯಾದರು ಏನು ಎನ್ನುವ ಬಗ್ಗೆ ಹೇಳಬೇಕು.

ಡಾ||ಎಂ. ಶಂಕರನಾಯಕ್ : ವೈದ್ಯರನ್ನು ಉನ್ನತ ಶಿಕ್ಷಣಕ್ಕೆ ಕಳುಹಿಸಿದ ಮೇಲೆ ಅವರ ಸರ್ವೀಸ್ ಮೊದಲು ಎಲ್ಲಿ ಕೆಲಸ ಮಾಡುತ್ತಿದ್ದರೋ ಅಲ್ಲಿಯೇ ಮಾಡಬಾರದು ಎಂದೇನೂ ಇಲ್ಲ. ಈಗ ಒಬ್ಬ ಕಾರ್ಡಿಯಾಲಜಿಯಲ್ಲಿ ಸ್ಪೆಷಲೈಸ್ಡ್ ಮಾಡಿಕೊಂಡರೆ ಅವರು ಇನ್ನೊಂದು ಆಸ್ಪತ್ರೆಗೆ ಹೋದಾಗ ಅಲ್ಲಿ ಇವರಿಗಿಂತ ಸೀನಿಯಾರಿಟಿ ಇರತಕ್ಕಂಥವರು ಬೇಕಾದಷ್ಟು ಜನರು ಇರುತ್ತಾರೆ. ಇವರು ಮೆಡಿಕಲ್ ಕಾಲೇಜಿನಲ್ಲಿ ಪ್ರೊಫೆಸರ್ ಆಗಿದ್ದರೆ ಅಂಥವರು ಇನ್ನೊಂದು ಕಾಲೇಜಿಗೆ ಹೋದಾಗ ಅಲ್ಲಿ ಸೀನಿಯಾರಿಟಿ ಪ್ರಕಾರ ಅಸಿಸ್ಟೆಂಟ್ ಪ್ರೊಫೆಸರ್ ಆಗಿಯೋ ಅಥವಾ ಲೆಕ್ಚರರ್ ಆಗಿಯೋ ಹೋಗಬೇಕು . ಆದರೆ ಇವರು ಅದಕ್ಕೆ ಒಪ್ಪುವುದಿಲ್ಲ. ಆದರೆ ಇವರು ಡೆಪ್ಯೂಟೇಷನ್ ಕೊಡಿ ಎಂದು ಹೇಳಿ, ನಾನು ಇಲ್ಲಿ ಪ್ರೊಫೆಸರ್ ಆಗಿದ್ದೇನೆ, ಅಲ್ಲೂ ಪ್ರೊಫೆಸರ್ ಆಗುತ್ತೇನೆ, ಎಂದರೆ ಅಲ್ಲಿ ಪಾಠ ಹೇಳುವುದಕ್ಕಾಗುವುದಿಲ್ಲ. ಅಲ್ಲಿ ಪಾಠ ಹೇಳತಕ್ಕಂಥವರು ಎಂ.ಡಿ. ಆದನಂತರ ಇರತಕ್ಕಂಥ ವಿದ್ಯಾರ್ಥಿಗಳಿಗೆ. ಪ್ರತಿವರ್ಷ ಇಬ್ಬರು ವಿದ್ಯಾರ್ಥಿಗಳು ನಮ್ಮ ರಾಜ್ಯದಲ್ಲಿ ಡಿ.ಎಂ. ಕಾರ್ಡಿಯಾಲಜಿ ಮಾಡುತ್ತಿದ್ದಾರೆ. ಪ್ರತಿ ವರ್ಷ ಇಬ್ಬಿಬ್ಬರಿಗೆ ಕೊಡುತ್ತಾ ಹೋದರೆ ಅದಕ್ಕೆ ಸಂಬಂಧಪಟ್ಟ ಹಾಗೆ ಕೊಡುವುದಕ್ಕೆ ಸ್ಥಳ ಇರುವುದಿಲ್ಲ. ಈಗ ಇರತಕ್ಕಂಥ ಆಸ್ಪತ್ರೆಯಲ್ಲಿ ಸಾಕಷ್ಟು ಪರಿಣಿತ ವೈದ್ಯರಿದ್ದಾರೆ. ಇವರ ಅವಶ್ಯಕತೆ ಅಲ್ಲಿ ಬೇಕಾಗಿಲ್ಲ. ಆದರೂ ಇವರು ನಾನು ಏನು ಇಲ್ಲಿ ಪ್ರೊಫೆಸರ್ ಆಗಿದ್ದೇನೆ, ಇಲ್ಲಿ ನನಗೆ ಅದೇ ಪೋಸ್ಟ್ ಕೊಡಿ ಎಂದು ಕೇಳಿದರೆ ಕೊಡುವುದಕ್ಕಾಗುವುದಿಲ್ಲ. ಏಕೆಂದರೆ ಅವರಿಗಿಂತ ಸೀನಿಯರ್ ಆಗಿರುವವರು ಬಹಳಷ್ಟು ಜನ ಇದ್ದಾರೆ. ಅಲ್ಲಿ ಇವರಿಗೆ ಪಾಠ ಹೇಳುವಂತಹ ಎಕ್ಸ್‌ಪಿರಿಯನ್ಸ್ ಇರುವುದಿಲ್ಲ. ಆ ದೃಷ್ಟಿಯಿಂದ ಅವರು

ಎಲ್ಲಿ ಪರಿಣಿತರು ಆಗಿದ್ದಾರೆ, ಅಲ್ಲಿ ಆ ಡಿಪಾರ್ಟ್‌ಮೆಂಟ್ ಅಭಿವೃದ್ಧಿ ಮಾಡಿ ಅಲ್ಲಿ ಕೆಲಸ ಮಾಡಬೇಕೇ ಹೊರತು ನಾನು ಇನ್ನೊಂದು ಆಸ್ಪತ್ರೆಗೆ ಓ.ಓ.ಡಿ ಮಾಡುತ್ತೇನೆ ಎಂದರೆ ಆಗುವುದಿಲ್ಲ. ಪಿ.ಹೆಚ್.ಸಿ. ಯಲ್ಲಿ ಇವತ್ತು ಅನೇಕ ಜನ ಎಂ.ಎಸ್., ಎಂ.ಡಿ. ಮಾಡಿದ್ದಾರೆ. ಅವರಿಗೆ ಹಳ್ಳಿಗಳಲ್ಲಿ ಕೆಲಸ ಮಾಡಬೇಡಿ ಎಂದು ಯಾರೂ ಹೇಳುವುದಿಲ್ಲ. ಹಳ್ಳಿ ಜನರಿಗೂ ಅವರ ಅವಶ್ಯಕತೆ ಇದೆ. ಅಲ್ಲಿ ಕೂಡ ಅವರು ಕೆಲಸ ಮಾಡಲಿ ಎನ್ನುವ ದೃಷ್ಟಿಯಿಂದ ಅವರಿಗೆ ನಾವು ಸಂಬಳ ಕೊಟ್ಟು ಎಲ್ಲಾ ವ್ಯವಸ್ಥೆ ಮಾಡಿ, ಅವರನ್ನು ಪಿ.ಜಿ. ಪೋಸ್ಟ್ ಮಾಡಿಸುತ್ತಿದ್ದೇವೆ. ಪಿ.ಜಿ. ಮಾಡಿದ ನಂತರ ಅವರು ನಾವು ದೊಡ್ಡ ಆಸ್ಪತ್ರೆಗೆ ಹೋಗುತ್ತೇವೆ, ಹಳ್ಳಿಗಳಿಗೆ ಹೋಗುವುದಿಲ್ಲವೆಂದರೆ ನಾವು ಪಿ.ಜಿ. ಮಾಡಿಸಿ ಏನು ಪ್ರಯೋಜನ?

ಶ್ರೀ ಜೆ.ಸಿ. ಮಾಧುಸ್ವಾಮಿ : ನೀವೇ ನಿಯಮವನ್ನು ಮಾಡಿದ್ದೀರಿ. ಆರು ವರ್ಷ ಆದಮೇಲೆ ಇಂತಿಂತಹ ಸ್ಪೆಷಲೈಸ್ಡ್ ಆದಮೇಲೆ ಇಂತಹ ಕೆಟಗರಿ ಆಸ್ಪತ್ರೆಯಲ್ಲೇ ಇರಬೇಕೆಂದು ಮಾಡಿದ್ದೀರಿ. ಇದು ಉತ್ತರ ಸಮರ್ಪಕವಾಗಿಲ್ಲ. ಆರು ವರ್ಷವಾದಮೇಲೆ ನೀವು ಹಳ್ಳಿಗಳಲ್ಲಿ ಇಡುವುದಿಲ್ಲ. ಪಿ.ಹೆಚ್.ಸಿ.ಗೆ ಹಾಕುತ್ತೀರಿ. ಸೂಪರ್ ಸ್ಪೆಷಲೈಸ್ಡ್ ಮಾಡಿಕೊಂಡು ಬಂದವನನ್ನು ಜನರಲ್ ಆಸ್ಪತ್ರೆಗೆ ಹಾಕುತ್ತೇವೆ ಎಂದು ಮಾಡಿದ್ದೀರಿ. ಆ ನಿಯಮಗಳನ್ನು ಎಲ್ಲಾ ನೀವೇ ರಚನೆ ಮಾಡಿ 3 ವರ್ಗ 4 ವರ್ಗ ಡಾಕ್ಟರ್‌ಗಳನ್ನು ಮಾಡಿ ಇವತ್ತು ಅಲ್ಲಿ ಇರುತ್ತಾನೆ ಎಂದು ಹೇಗೆ ಹೇಳುತ್ತೀರಿ? 12 ವರ್ಷವಾದಮೇಲೆ ಅವನು ದೊಡ್ಡ ಆಸ್ಪತ್ರೆಗೆ ಶಿಫ್ಟ್ ಆಗೇ ಆಗುತ್ತಾನೆ. ಕಾಲೇಜಿನಲ್ಲಿ ಇರುವವರಿಗೂ ಏಕೆ ಶಿಫ್ಟ್ ಮಾಡಬಾರದು ಎಂದು ಕೇಳುತ್ತಿರುವುದು. ಆಸ್ಪತ್ರೆಯಲ್ಲಿ ಮಾಡುವುದಕ್ಕಾಗುತ್ತದೆ. ಕಾಲೇಜುಗಳಲ್ಲಿ ಇರುವವರಿಗೆ ಏಕೆ ಮಾಡುತ್ತಿಲ್ಲ?

ಡಾ|| ಎಂ. ಶಂಕರನಾಯಕ್ : ಆಸ್ಪತ್ರೆಯಲ್ಲಿ ಮಾಡತಕ್ಕಂಥ ಕೆಲಸ ಬೇರೆ. ಕಾಲೇಜಿನಲ್ಲಿ ಮಾಡತಕ್ಕಂಥ ಕೆಲಸ ಬೇರೆ. ಕಾಲೇಜಿನಲ್ಲಿ ಪಾಠ ಮಾಡಬೇಕು. ಅವರು 20-25 ವರ್ಷ ಪಿ.ಹೆಚ್.ಸಿ. ಯಲ್ಲಿ ಕೆಲಸ ಮಾಡಿ ಎಕ್ಸ್‌ಪೀರಿಯನ್ಸ್ ಆಗಿ ಸೀನಿಯರ್ ಆಗಿರುತ್ತಾರೆ. ನನಗೆ ಅಲ್ಲಿ ಪ್ರೊಪೆಸರ್ ಆಗಿ ಹಾಕಿ ಎಂದರೆ ಅವರಿಗೆ ಪಾಠ ಹೇಳತಕ್ಕಂಥ ಅರ್ಹತೆ ಬೇಕಲ್ಲಾ. ದಿನನಿತ್ಯ ಪಾಠ ಹೇಳುವಾಗ ಏನು ಬದಲಾವಣೆಯಾಗಿದೆ ಎನ್ನುವುದನ್ನು ಹೇಳಿದಾಗ ಮಾತ್ರ ಕಲಿಯುವುದಕ್ಕೆ ವಿದ್ಯಾರ್ಥಿಗಳಿಗೆ ಸಾಧ್ಯವಾಗುತ್ತದೆ. ಎಗ್ಸಾಮ್ಸ್‌ಗೆ ಕುಳಿತುಕೊಳ್ಳುವುದಕ್ಕೆ ಅರ್ಹತೆ ಬರುತ್ತದೆ. ಇಲ್ಲಿ ಪಿ.ಹೆಚ್.ಸಿ.ಯಲ್ಲಿ ಚಿಕಿತ್ಸೆ ಮಾಡಿ ಅವರಿಗೆ ಪಾಠ ಹೇಳುವುದಕ್ಕೆ ಆಗದೇ ಇರುವವರನ್ನು ತೆಗೆದುಕೊಂಡು ಹೋಗಿ ಅಲ್ಲಿ ಹಾಕಿದರೆ ಅವರು ಎಷ್ಟರಮಟ್ಟಿಗೆ ಪಾಠ ಮಾಡಬಹುದು?

ರಾಜ್ಯದಲ್ಲಿ ಸಂಚಾರಿ ಗ್ರಂಥಾಲಯ

150 - ಶ್ರೀ ಯು.ಆರ್.ಸಭಾಪತಿ (ಉಡುಪಿ) : ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಂಚಾರಿ ಗ್ರಂಥಾಲಯಗಳು ಒಟ್ಟು ಎಷ್ಟು?